|| ಶ್ರೀವಿಜಯದಾಸರಂತರ್ಗತ ಶ್ರೀವಾದಿರಾಜಗುರ್ವಂತರ್ಗತ
ಶ್ರೀಮಧ್ವರಾಜಗುರುಭ್ಯೋನಮಃ ||
|| ಶ್ರೀಮುಖ್ಯ ಪ್ರಾಣದೇವರ ಸುಳಾದಿ ||

ಕೋತಿಯಾದರೆ ಬಿಡೆನೊ ಬಲುಪರಿ |
ಭೂತಳದೊಳು ಪಾರ್‍ಯಾಡಲು ಬಿಡೆನೊ |
ಖ್ಯಾತಿ ತೊರೆದು ಕಚ್ಚುಟಹಾಕಲು ಬಿಡೆನೊ |
ಚಾತುರ ಬಿಟ್ಟರೆ ಬಿಡೆನೊ ನಾ ಬಿಡೆನೊ |
ಭೀತಿ ಬೀರಲು ಬಿಡೆನೊ ಮಾತು |
ಮಾತಿಗೆ ಹಲ್ಲು ತೋರಲು ಬಿಡೆನೊ |
ಗಾತುರ ಗಗನಕ್ಕೆ ಬೆಳಸಲು ಬಿಡೆನೊ |
ಕೋತಿ ಸೇವಿಸಲು ಬಿಡೆನೊ |
ಆತುರದಲ್ಲಿ ವನಧಿ ಲಂಘಿಸಿದರೆ ಬಿಡೆ |
ಆ ತರುಗಳ ಕಿತ್ತಲು ಬಿಡೆನೊ |
ವೀತಿಹೋತ್ರನ ಬಾಲದಲ್ಲಿ ಇಟ್ಟರೆ ಬಿಡೆ |
ಜಾತು ಧರ್ಮವ ಬಿಟ್ಟರೆ ಬಿಡೆನೊ |
ಈ ತೆರದಲ್ಲಿ ನೀನು ಇದ್ದರೇನಯ್ಯಾ ಬೆ - |
ನ್ನಾತು ಕೇಳುವದು ನಾ ಬಿಡಬಲ್ಲನೇ |
ತಾತಾ ಇನ್ನಿದರಿಂದ ಆವದಾದರು ಬರಲಿ |
ದಾತಾ ಮತ್ತಿದರಿಂದ ಏನಾದರಾಗಲಿ |
ಸೋತು ಹಿಂದಗದು ಪೋದರೆ ನಿನ್ನ ಪದದಾಣೆ |
ಯಾತಕ್ಕೆ ಸಂಶಯವೊ ಬಿಡೆನೊ ಬಿಡೆನೊ ಖ - |
ದ್ಯೋತ ಮಂಡಲ ಪೋಗಲು ಬಿಡೆನೊ |
ಮಾತು ಪೊಳ್ಳಾದರೆ ನೂರೊಂದು ಕುಲ ಎನ್ನ |
ಗೋತ್ರದವರಿಗೆ ಗತಿ ಎಲ್ಲೆದೋ |
ವಾತನ್ನ ಮಗ ವಾತ ಆತನ್ನ ರೂಪವ |
ಗಾತುರದಲ್ಲಿ ನಿನ್ನೊಳಗೆ ತೋರೊ |
ಜ್ಯೋತಿರ್ಮಯ ರೂಪ ವಿಜಯ ವಿಠ್ಠಲರೇಯನ |
ದೂತ ದುರ್ಜನ ಹಾರಿ ದುಃಖನಿವಾರಿ || 1||

|| ಮಟ್ಟತಾಳ ||

ಭೂತಳದೊಳಗೆ ಇದ್ದಭೂಮಿ ಸುತ್ತಲು ಬಿಡೆ |
ಭೀತಿ ನಾಮವನ್ನು ಇಟ್ಟುಕೊಂಡರೆ ಬಿಡೆ |
ನೀ ತಿರಿದುಂಡರೆ ಬಿಡೆನೊ ಬಿಡೆನೊ ಆ |
ರಾತಿಗಳಿಗೆ ಸೋತು ಅಡಿವಿಸೇರಲು ಬಿಡೆನೊ |
ಸೋತುಮತವಬಿಟ್ಟು ಅಡಿಗಿ ಮಾಡಲು ಬಿಡೆ |
ಘಾತಕ ನೀನಾಗಿ ಕುಲವಕೊಂದರೆ ಬಿಡೆ |
ಮಾತುಗಾರಿಕೆಯಿಂದ ಯತಿಯಾದರೆ ಬಿಡೆನೊ |
ಪ್ರೀತ ಸಲಹೊ ಎನ್ನ ಸಾಕದಿದ್ದರೆ ನಿನ್ನ |
ಪೂತುರೆ ದ್ವಿತಿಯೇಶನೆಂದು ಪೊಗಳಲ್ಯಾಕೆ |
ನಾಥನಲ್ಲಿ ನಿನ್ನ ಮಂತ್ರಿ ತನವೇನೊ |
ಪೋತಭಾವ ನಮ್ಮ ವಿಜಯ ವಿಠ್ಠಲರೇಯನ |
ಆತುಮದೊಳಗಿಟ್ಟ ಭಾರತಿ ರಮಣಾ || 2 ||

|| ತ್ರಿವಿಡಿ ತಾಳ ||

ಭಾರವೆ ನಾನೊಬ್ಬ ಶರಣಾ ನಿನಗಲ್ಲವೇ |

ಬಾರಿ ಬಾರಿಗೆ ನಿನ್ನ ಆಹಿಕ ಸೌಖ್ಯ।
ಮೀರದೆ ಕೊಡು ಎಂದು ಬೇಡಿ ಬ್ಯಾಸರಿಸು ವಿ -।
ಸ್ತಾರವಾಗಿ ಗುರುವೆ ಕಾಡಿದೇನೇ।
ಧಾರುಣಿಯೊಳು ಪುಟ್ಟಿ ಪಾರುಗಾಣದ ಸಂ - ।
ಸಾರ ಹೇಯವೆಂದು ಕೇಳಿ ನಿನಗೆ।
ದೂರಿದೆನೊ ಇದು ದೈನ್ಯದಿಂದಲಿ ವಿ - ।
ಚಾರಿಸಿದರೊಳಿತೆ ಇಲ್ಲದಿದ್ದರೆ ಲೇಸೆ
ಸಾರಿ ಸಾರಿಗೆ ನಿನ್ನ ಸೌಭಾಗ್ಯ ಚರಣವ।
ತೋರಿಸಿ ಧನ್ಯನ್ನ ಮಾಡೆಂದೆನೊ।
ಕಾರುಣ್ಯದಲಿ ಕೈಟಭಾರಿ ಪ್ರಿಯನೆ।
ಆರನ್ನ ಕಾಣೆನೋ ನಿನ್ನ ವಿನಾ।
ಕೀರುತಿ ಅಪಕೀರ್ತಿ ನಿನ್ನದಯ್ಯಾ।
ವಾರಣಾವರ ವಂದ್ಯ ವಿಜಯ ವಿಠ್ಠಲರೇಯನ।
ಸೇರುವ ಪರಿ ಮಾಡೊ ತಾರತಮ್ಯ ಭಾವದಲಿ ॥ 3 ॥

॥ ಅಟ್ಟ ತಾಳ ॥

ನೀನು ಒಲಿಯೇ ಹರಿತಾನೆ ಒಲಿವನಯ್ಯಾ।
ನೀನು ಮುನಿದಡೆ ಹರಿತಾನೆ ಮುನಿವನು।
ಏನೆಂಬ ನಿನ್ನ ಮೇಲಣ ಹರಿ ಕಾರುಣ್ಯ।
ನೀನಲ್ಲದಿಲ್ಲದ ಸ್ಥಾನದಿ ತಾನಿಲ್ಲಾ।
ಪ್ರಾಣೇಶ ನಮೋ ನಮೋ ನಿನ್ನ ಪಾದಾಬ್ಜಕ್ಕೆ।
ವಾನರೇಶ ಸುಗ್ರೀವ ವಾಲಿ ಸಾಕ್ಷಿ।
ಜ್ಞಾನೇಶ ಭಕ್ತಿ ವಿರಕ್ತೇಶ ಅಮರೇಶ।
ಆನಂದ ಆನಂದ ಮೂರುತಿ ಗುರುರಾಯ।
ಪಾಣಿ ಗ್ರಹಣ ಮಾಡೊ ಪತಿತ ಪಾವನದೇವ।
ಪ್ರಾಣೇಂದ್ರಿಯಗಳು ದೇಹ ಚೇತನ ಚಿತ್ತವ।
ಧಾನ ಮಾಡಲಿ ಸರ್ವ ನಿನ್ನಾಧೀನವೆಂದು।
ನೀನಿರೆಲಾವಾಗ ಅನ್ಯ ಜನರಿಗೆ ಮತ್ತಾನು।
ಬಿನ್ನೈಪೇನೆ ದೇಹ ತ್ಯಾಗವಾಗಿ।
ಶ್ರೀನಾಥ ವಿಜಯ ವಿಠ್ಠಲರೇಯನ ಪಾದ।
ರೇಣುಧರಿಸುವ ಸರ್ವರುದ್ಧಾರೀ।

॥ ಆದಿ ತಾಳ ॥

ಎಲ್ಲ ಕಾಲದಲ್ಲಿ ನಿನ್ನಲ್ಲಿ ಭಕ್ತಿ ಇಪ್ಪ।
ಸಲ್ಲಲಿತ ಮನುಜರ ಪದ ಪಾಂಸ ಶಿರ।
ದಲ್ಲಿ ಧರಿಸುವಂತೆ ಸಂತತ ಮತಿ ಇತ್ತು।
ಬಲ್ಲಿದ ಕಾಮ ಬಿಡಿಸು ಬಲವಂತ ಗುಣವಂತ।
ಬಲ್ಲವ ಭವದೂರ ನೀನೆ ಗತಿಯೊ ಜಗ - ।
ದೊಲ್ಲಭ ಮುಂದಣ ವಾಣೇಶ ಸುಖಪೂರ್ಣ।
ಅಲ್ಲದಿದ್ದರೆ ಎನ್ನ ಕಾವ ಕರುಣಿಯ ಕಾಣೆ।
ಮಲ್ಲ ಮರ್ದನ ನಮ್ಮ ವಿಜಯ ವಿಠ್ಠಲರೇಯನ।
ನಿಲ್ಲಿಸಿ ಮನದಲ್ಲಿ ಪ್ರತಿಕೂಲವಾಗಿದೆ।

॥ ಜತೆ ॥

ಅನಂತ ಜನುಮಕ್ಕೆ ನೀನೇ ಗುರು ಎಂಬ।
ಜ್ಞಾನವೇ ಕೊಡು ಜೀಯಾ ವಿಜಯ ವಿಠ್ಠಲದಾಸ ॥ 6 ॥

॥ ಶ್ರೀಮದ್ವೇಶಾರ್ಪಣಮಸ್ತು ॥